ನಿಮ್ಮೊಡನೆ

# ಅಂತಃಕರಣದ ಕನ್ನಡಿಗೆ ಅಂಟಿದೆ ಜಿಡ್ಡು ಮಕ್ಕಳ ನಾಳೆಗಳು ಕಾಣಿಸುವುದು ಹೇಗೆ?

> ಸಮಕಾಲೀನ ಸಮಾಜದ ಅಂತಃಕರಣ ಜಿಡ್ಡು ಅಂಟಿಸಿಕೊಂಡ ಕನ್ನಡಿಯಂತಿದೆ. ಆ ಕನ್ನಡಿ ಯಲ್ಲಿ ನಮ್ಮ ಮಕ್ಕಳ ಭವಿಷ್ಯವನ್ನು ನಾವು ನೋಡುವುದು ಹೇಗೆ? ನಾಳೆಯ ಪೀಳಿಗೆಯ ಬಗ್ಗೆ ಕಾಳಜಿಯುಳ್ಳವರೆಲ್ಲರೂ ಸಮಾಜದ ಆರೋಗ್ಯವನ್ನು ಸುಧಾರಿಸುವ ಬಗ್ಗೆ ಯೋಚಿಸಬೇಕಾಗಿದೆ. ಪರಿಸ್ಥಿತಿ ನಿರ್ಲಕ್ಷಿಸಿದರೆ, ನಮ್ಮ ಮಕ್ಕಳಿಗೆ ಉಳಿಯುವುದು ಭಾವರಾಹಿತ್ಯವಾದ ಯಾಂತ್ರಿಕ ಜಗತ್ತಷ್ಟೇ.

ಮೌಢ್ಯ–ಕಂದಾಚಾರಗಳಿಗೆ ಸಂಬಂಧಿಸಿದಂತೆ ಅನಕ್ಷರಸ್ಥಗಿಂತಲೂ ಕೆಲವೊಮ್ಮೆ ವಿದ್ಯಾವಂತರೇ ಹೆಚ್ಚು ಕ್ರೂರಿಗಳಾಗಬಲ್ಲರು ಎನ್ನುವುದಕ್ಕೆ ಇಬ್ಬರು ಹೆಣ್ಣುಮಕ್ಕಳನ್ನು ಹೆತ್ತವರೇ ಹೊಡೆದು ಕೊಂದಿರುವ ಹೈದರಾಬಾದ್‌ನಲ್ಲಿನ ಘಟನೆ ಉದಾಹರಣೆಯಂತಿದೆ. ಮಾಟ–ಮಂತ್ರದ ಬಗ್ಗೆ ನಂಬಿಕೆಯುಳ್ಳ ವಿದ್ಯಾವಂತ ದಂಪತಿ, ದುಷ್ಟ ಶಕ್ತಿಗಳ ಪ್ರಭಾವದಿಂದಾಗಿ ಸತ್ತವರು ಕೆಲವೇ ಗಂಟೆಗಳಲ್ಲಿ ಹುಟ್ಟಿಬರುತ್ತಾರೆ ಎಂದು ನಂಬಿ ತಮ್ಮ ಪುತ್ರಿಯರನ್ನು ಕೊಂದಿದ್ದಾರೆ. ನತದೃಷ್ಟ ಸೋದರಿಯರಲ್ಲಿ ಹಿರಿಯವಳು ಸ್ನಾತಕೋತ್ತರ ಪದವಿಯ ವಿದ್ಯಾರ್ಥಿನಿ. ಕಿರಿಯವಳು ಸಂಗೀತದ ವಿದ್ಯಾರ್ಥಿನಿ. ಕೊರೊನಾ ಲಾಕ್‌ಡೌನ್ ಕಾರಣದಿಂದಾಗಿ ಈ ಇಬ್ಬರೂ ತಮ್ಮ ಪೋಷಕರ ಜೊತೆಯಲ್ಲಿಯೇ ನೆಲೆಸಿದ್ದರು. ಮಕ್ಕಳನ್ನು ಕೊಂದಿರುವ ದಂಪತಿ ಮತಿಭ್ರಮಣೆಗೊಳಗಾಗಿದ್ದು, ವಿಚಿತ್ರವಾಗಿ ವರ್ತಿಸುತ್ತಿದ್ದಾರೆ ಎಂದು ತನಿಖೆ ನಡೆಸುತ್ತಿರುವ ಅಧಿಕಾರಿಗಳು ಹೇಳಿದ್ದಾರೆ. ಇರಬಹುದು, ಆ ದಂಪತಿ ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿರಬಹುದು. ಆದರೆ, ಹೆತ್ತವರ ಭ್ರಮೆ ಮಕ್ಕಳನ್ನು ಕೊಲ್ಲುವ ಮಟ್ಟಿಗೆ ವಿಕೋಪಕ್ಕೆ ಹೋಗುತ್ತದೆನ್ನುವುದನ್ನು ಊಹಿಸಿಕೊಳ್ಳುವುದೂ ಕಷ್ಟ.

ಹೈದರಾಬಾದ್‌ನಲ್ಲಿ ನಡೆದಿರುವ ಅಮಾನವೀಯ ಘಟನೆಯನ್ನು ದಂಪತಿಯ ಮಾನಸಿಕ ಸಮಸ್ಯೆಯ ದೃಷ್ಟಿಯಿಂದಷ್ಟೇ ನೋಡುವುದು ಸಾಧ್ಯವಿಲ್ಲ. ಮೌಢ್ಯ–ಕಂದಾಚಾರಗಳು ವಿದ್ಯಾವಂತ–ಅವಿದ್ಯಾವಂತ ಭೇದವಿಲ್ಲದೆ ನಮ್ಮ ಸಮಾಜವನ್ನು ವ್ಯಾಪಕವಾಗಿ ಆವರಿಸಿಕೊಂಡಿರುವ ಹಿನ್ನೆಲೆಯಲ್ಲಿ ನೋಡಬೇಕು. ಗಂಡ ಸಹಾಯಕ ಪ್ರಾಧ್ಯಾಪಕನಾಗಿದ್ದು, ಹೆಂಡತಿ ಪ್ರಾಂಶುಪಾಲ ಹುದ್ದೆಯಲ್ಲಿರುವುದನ್ನು ಗಮನಿಸಿದರೆ, ಶಿಕ್ಷಣದಿಂದ ಅವರು ಪಡೆದದ್ದೇನು ಹಾಗೂ ಶಿಕ್ಷಣಕ್ಷೇತ್ರದಲ್ಲಿರುವ ಅವರು ತಮ್ಮ ವಿದ್ಯಾರ್ಥಿಗಳಿಗೆ ಹೇಳಿಕೊಡುತ್ತಿರುವುದೇನು ಎನ್ನುವುದರ ಬಗ್ಗೆಯೇ ಅನುಮಾನ ಹುಟ್ಟುತ್ತದೆ. ಪ್ರಸಕ್ತ ಘಟನೆ, ಶೈಕ್ಷಣಿಕ ಗುಣಮಟ್ಟ ಹೆಚ್ಚಿದಷ್ಟೂ ವೈಚಾರಿಕ ಮನೋಧರ್ಮವೂ ಹೆಚ್ಚುತ್ತದೆ ಎನ್ನುವ ನಂಬಿಕೆಯನ್ನೇ ಬುಡಮೇಲು ಮಾಡುವಂತಿದೆ. ಅತೀಂದ್ರಿಯ ಶಕ್ತಿಗಳನ್ನು ವಶಪಡಿಸಿಕೊಳ್ಳಲು ಬಲಿ ನೀಡುವ ಇಲ್ಲವೇ ನಿಧಿಗಾಗಿ ಮಕ್ಕಳನ್ನು ಕೊಲ್ಲುವ ಘಟನೆಗಳು ಆಗಾಗ ಮಾಧ್ಯಮಗಳಲ್ಲಿ ವರದಿಯಾಗುತ್ತಲೇ ಇರುತ್ತವೆ. ದೇವರು–ದೆವ್ವದ ಹೆಸರಿನಲ್ಲಿನ ಶೋಷಣೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ನಡೆಯುತ್ತಲೇ ಇದೆ. ಹೆಣ್ಣುಮಕ್ಕಳನ್ನು ಭ್ರೂಣದಲ್ಲೇ ಹೊಸಕಿಹಾಕುವ ಘಟನೆಗಳು ಕದ್ದೂಮುಚ್ಚಿ ನಡೆಯುತ್ತಲೇ ಇವೆ. ಜಾತಿಯ ಮೇಲರಿಮೆಯಂತೂ ಸಮಾಜದಲ್ಲಿ ದೊಡ್ಡ ಗಾಯಗಳನ್ನು ಸೃಷ್ಟಿಸಿದೆ. ನೂರಾರು ವರ್ಷಗಳಿಂದ ಉಳಿದುಬಂದಿರುವ ಇಂಥ ಸಾಮಾಜಿಕ ಅನಿಷ್ಟಗಳನ್ನು ನಾಶ ಮಾಡಲಿಕ್ಕೆ ನಮ್ಮ ಶಿಕ್ಷಣಕ್ರಮಕ್ಕೆ ಸಾಧ್ಯವಾಗಿಲ್ಲ ಎನ್ನುವುದಕ್ಕಿಂತಲೂ ದೊಡ್ಡ ವಿಪರ್ಯಾಸ ಮತ್ತೊಂದಿರಲಿಕ್ಕಿಲ್ಲ.

ಸಾಮಾಜಿಕ ತರತಮಗಳಿಗೆ ಶಿಕ್ಷಣದ ಕೊರತೆಯೇ ಕಾರಣ ಎಂದು ಈ ಮೊದಲು ನಂಬಲಾಗಿತ್ತು. ಆದರೆ, ಅದು ಸಂಪೂರ್ಣ ಸತ್ಯವಲ್ಲ ಎನ್ನುವುದನ್ನು ಈ ಹೊತ್ತಿನ ವಿದ್ಯಮಾನಗಳು ಸ್ಪಷ್ಟಪಡಿಸುತ್ತಿವೆ. ಮನಸ್ಸಿನ ಕುಂದುಕೊರತೆಗಳನ್ನು ಸರಿಪಡಿಸಿ, ವ್ಯಕ್ತಿತ್ವವನ್ನು ಉದಾತ್ತಗೊಳಿಸುವುದು ಶಿಕ್ಷಣಕ್ಕೆ ಸಾಧ್ಯವಾಗಿದ್ದರೆ, ಧರ್ಮದ ಹೆಸರಿನಲ್ಲಿ ಬಡಿದಾಡುವ ಇಲ್ಲವೇ ಗೋಡೆಗಳನ್ನು ಕಟ್ಟಿಕೊಳ್ಳುವ ಸಂದರ್ಭಗಳು ಸೃಷ್ಟಿಯಾಗುತ್ತಿರಲಿಲ್ಲ. ಕೆಡಹುವ, ಕಟ್ಟುವ ಉನ್ಮಾದಗಳು ತಲೆದೋರುತ್ತಿರಲಿಲ್ಲ. ಹೆಣ್ಣುಮಕ್ಕಳನ್ನು ಪಿಶಾಚಿಗಳಂತೆ ಕಿತ್ತುತಿನ್ನುವ ಘಟನೆಗಳು ದೇಶದಲ್ಲಿ ವರದಿಯಾಗುತ್ತಿರಲಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಒಬ್ಬರ ಮೇಲೊಬ್ಬರು ಕೆಸರು ಎರಚಿಕೊಳ್ಳುವ ವಿಕೃತ ಮನೋಭಾವ ಇರುತ್ತಿರಲಿಲ್ಲ. ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಉನ್ನತ ವರ್ಗಕ್ಕೆ ಸೇರಿದವರೂ ಇಂಥ ಅಮಾನವೀಯ ಘಟನೆಗಳಲ್ಲಿ ತೊಡಗಿಕೊಂಡಿರುವ ಉದಾಹರಣೆಗಳು, ನಮ್ಮ ಶೈಕ್ಷಣಿಕ ವ್ಯವಸ್ಥೆಗೆ ಕಿಲುಬು ಹಿಡಿದಿರುವುದನ್ನು ಸೂಚಿಸುವಂತಿವೆ.

ಹೊಸ ಕಾಲದ ಮೌಢ್ಯಗಳು ನಮ್ಮನ್ನು ಎಷ್ಟರಮಟ್ಟಿಗೆ ಆವರಿಸಿಕೊಂಡಿವೆಯೆಂದರೆ, ಬಡತನ, ಹಸಿವು, ನಿರುದ್ಯೋಗಗಳಂತಹ ಸಮಸ್ಯೆಗಳೂ ನಮಗೆ ಮುಖ್ಯವೆನ್ನಿಸುತ್ತಿಲ್ಲ. ಕೌಟುಂಬಿಕ ಹಾಗೂ ಸಾಮಾಜಿಕ ಒಡನಾಟಗಳಿಗಿಂತಲೂ ವರ್ಚುವಲ್ ಜಗತ್ತೇ ಹೆಚ್ಚು ಹಿತಕರವಾಗಿ, ರೋಚಕವಾಗಿ ಕಾಣಿಸುತ್ತಿರುವ ಸಂದರ್ಭ ಇಂದಿನದು. ಸಾಮಾಜಿಕ ಜಾಲತಾಣಗಳಲ್ಲಿ ಹಟಕ್ಕೆ ಬಿದ್ದು ಸಿದ್ಧಾಂತಗಳ ವಕೀಲಿಕೆ ವಹಿಸುವ ಅನೇಕರು, ತಮ್ಮ ಸುತ್ತಮುತ್ತಲ ಸಂಗತಿಗಳ ಬಗ್ಗೆ ಭಾವರಾಹಿತ್ಯ ಮನಸ್ಥಿತಿ ಹೊಂದಿರುವುದನ್ನು ನಾವಿಂದು ನೋಡುತ್ತಿದ್ದೇವೆ.

‘ತುಪ್ಪೇರಿದ ದರ್ಪಣದೊಳ್ ಪಜ್ಜಳಿಸಲಾರ್ಪುದೆ ಪ್ರತಿಬಿಂಬಂ’ ಎಂದು ‘ಯಶೋಧರ ಚರಿತೆ’ಯ ಜನ್ನ ಕವಿ ಉದ್ಗರಿಸುತ್ತಾನೆ. ಸಮಕಾಲೀನ ಸಮಾಜದ ಅಂತಃಕರಣವೂ ಜಿಡ್ಡು ಅಂಟಿಸಿಕೊಂಡ ಕನ್ನಡಿಯಂತಿದೆ. ಆ ಕನ್ನಡಿಯಲ್ಲಿ ನಮ್ಮ ಮಕ್ಕಳ ಭವಿಷ್ಯವನ್ನು ನಾವು ನೋಡುವುದು ಹೇಗೆ? ನಾಳೆಯ ಪೀಳಿಗೆಯ ಬಗ್ಗೆ ಕಾಳಜಿಯುಳ್ಳವರೆಲ್ಲರೂ ಸಮಾಜದ ಆರೋಗ್ಯವನ್ನು ಸುಧಾರಿಸುವ ಬಗ್ಗೆ ಯೋಚಿಸಬೇಕಾಗಿದೆ. ಶಾಲಾ ಶಿಕ್ಷಣ ಹಾಗೂ ಕೌಟುಂಬಿಕ ಶಿಕ್ಷಣ – ಎರಡರ ಬಗ್ಗೆಯೂ ನಮ್ಮ ನಂಬಿಕೆಗಳನ್ನು ಪುನರ್ ವಿಮರ್ಶೆಗೆ ಒಡ್ಡಿಕೊಳ್ಳಬೇಕಾಗಿದೆ. ಪರಿಸ್ಥಿತಿ ನಿರ್ಲಕ್ಷಿಸಿದರೆ, ನಮ್ಮ ಮಕ್ಕಳಿಗೆ ಉಳಿಯುವುದು ಭಾವರಾಹಿತ್ಯವಾದ ಯಾಂತ್ರಿಕ ಜಗತ್ತಷ್ಟೇ.

■ ರಘುನಾಥ ಚ.ಹ.



ಈಶ್ವರ್